೧	೨	೩
೧೦೯	ಶಾಂತವಾಣಿ	೪೪೬೦
೧೧೦	ವಿಜಯ	೨೨೯೦
೧೧೧	ಶಕ್ತಿ	೬೨೫೯೦
೧೧೨	ನಗರಧೂತ್	೧೦೬೭೩
೧೧೩	ಅರುಣ	೩೦೦೮
೧೧೪	ವರ್ತಮಾನ	೯೫೮
೧೧೫	ಟೈಮ್ಸ್ ಆಫ್ ಇಂಡಿಯಾ	೭೧೧೦೬
೧೧೬	ಇಂಡಿಯನ್ ಎಕ್ಸ್‌ಪ್ರೆಸ್	೧೩೪೪೦
	ಒಟ್ಟು ರೂ.	೨೭೩೭೩೫೬

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿಭಾವಂತ ಪದವೀಧರರನ್ನು ರಾಜ್ಯ ಸರ್ಕಾರದ ಎ ಮತ್ತು ಬಿ ಗುಂಪಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿಕೊಳ್ಳುವ ಬಗ್ಗೆ.

೪೦೫೭ ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೩-೮೪, ೧೯೮೪-೮೫, ೧೯೮೫-೮೬ ಮತ್ತು ೧೯೮೬-೮೭ನೇ ಸಾಲಿನಲ್ಲಿ ಪ್ರತಿಭೆಯಿಂದ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ಪರಿಶಿಷ್ಟ ಜಾತಿಗೆ ಸೇರಿದ ಎಷ್ಟು ಜನರನ್ನು ಸರ್ಕಾರಿ ಸೇವೆಗಳಿಗೆ ನೇರ ನೇಮಕ ಮಾಡಿಕೊಳ್ಳಲಾಗಿದೆ.

ಆ) ಆಡಳಿತ ನ್ಯಾಯ ಮಂಡಳಿಯು ನೀಡಿದ್ದ ತಡೆಯಾಜ್ಞೆಯನ್ನು ತೆರವು ಮಾಡಿಸಲು ಮತ್ತು ಆ ಎಲ್ಲಾ ಅಭ್ಯರ್ಥಿಗಳನ್ನು ಸೇವೆಗಳಿಗೆ ಸೇರಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆಯೇ?

ಇ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಸ್. ಆರ್. ಬೊಮ್ಮಾಯಿ, (ಮುಖ್ಯ ಮಂತ್ರಿಯಂವರು).—

ಅ) ಯಾರನ್ನೂ ನೇಮಕ ಮಾಡಿಕೊಂಡಿಲ್ಲ.

ಆ) ತಡೆಯಾಜ್ಞೆಯನ್ನು ಉಚ್ಚ ನ್ಯಾಯಾಲಯವು ನೀಡಿತ್ತು.

ಇ) ತಡೆಯಾಜ್ಞೆ ತೆರವು ಮಾಡುವಂತೆ ಕೋರಿ ರಾಜ್ಯ ಸರ್ಕಾರವು ಸಲ್ಲಿಸಿದ್ದ ಅರ್ಜಿಯನ್ನು ಉಚ್ಚ ನ್ಯಾಯಾಲಯ ತಳ್ಳಿ ಹಾಕಿತು. ಈ ಪ್ರಕರಣ ನಂತರ ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ವರ್ಗಾವಣೆಗೊಂಡಿತು. ಪ್ರಕರಣದಲ್ಲಿ ವಾದ ಪ್ರತಿವಾದಗಳು ಅಂತ್ಯಗೊಂಡಿದೆ. ಆಡಳಿತ ನ್ಯಾಯ ಮಂಡಳಿ ತೀರ್ಪನ್ನು ಕಾದಿರಿಸಿದೆ.